ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು

೫೮೨. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಕಾನೂನು, ಯೋಜನೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಹೆಚ್ಚಿನ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಸಚಿವರು).—

(ಅ) ಮತ್ತು (ಆ) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರು ದಿನಾಂಕ ೧೩-೬-೯೦ರ ಆರ್.ಎಸ್.ಬಿ ೬೦/೯೦ನೇ ಕ್ರಮ ಸಂಖ್ಯೆಯ ತಮ್ಮ ಪತ್ರದಲ್ಲಿ (ಪ್ರತಿಯನ್ನು ಲಗತ್ತಿಸಲಾಗಿದೆ), ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ಮಾಹಿತಿಗೆ ಸಂಬಂಧಪಟ್ಟಂತೆ, ಪಾರ್ಟ್ (ಎ) ಮತ್ತು (ಬಿ) ಯಲ್ಲಿರುವ ಪ್ರಶ್ನೆಗೆ ಸಂವಿಧಾನದ ೭ನೇ ಅನುಸೂಚಿಯ ೨೪ನೇ ನಮೂದಿನ ಅಡಿಯಲ್ಲಿ ಉಚ್ಚ ನ್ಯಾಯಾಲಯದ ರಚನೆ ಮತ್ತು ಸಂಘಟನೆಗೆ ಸಂಬಂಧಪಟ್ಟ ವಿಧಾಯಿ ಅಧಿಕಾರವು ಸಂಪೂರ್ಣವಾಗಿ ಕೇಂದ್ರ ಸಂಬಂಧಿತ ವಿಷಯವಾಗಿರುವುದರಿಂದ ಪೂರ್ವೋತ್ತ ಪ್ರಶ್ನೆಗೆ ಉಚ್ಚ ನ್ಯಾಯಾಲಯವು ಮಾಹಿತಿ ನೀಡುವ ಅಗತ್ಯ ಇಲ್ಲ. ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ ೧೯೬೧ರ ೧೧ನೇ ಪ್ರಕರಣವು ಸಂವಿಧಾನದಲ್ಲಿ ಕಲ್ಪಿಸಿರುವ ಅವಕಾಶಕ್ಕೆ ಸಂಗತವಾಗುವಷ್ಟರ ಮಟ್ಟಿಗೆ ಅನ್ವಯವಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಹಸಿರು ಕಾರ್ಡುಗಳ ವಿತರಣೆಗೆ ಫಲಾನುಭವಿಗಳನ್ನು ಗುರುತಿಸುವುದು

೬೬೧. ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸರ್ಕಾರವು ಹಸಿರು ಕಾರ್ಡುಗಳನ್ನು ನೀಡಲು ಹೊಸದಾಗಿ ಫಲಾನುಭವಿಗಳನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆಯೆ?

ಆ) ೧೯೮೫-೮೬ನೇ ಸಾಲಿನಲ್ಲಿ ಅಳವಡಿಸಿದ ಮಾದರಿಯಂತೆ ಫಲಾನುಭವಿಗಳನ್ನು ಗುರುತಿಸುತ್ತದೆಯೇ ? ಅಥವಾ ಫಲಾನುಭವಿಗಳನ್ನು ಗುರುತಿಸಲು ಮಾರ್ಗದರ್ಶನವನ್ನು ನೀಡುವ ಪ್ರಸ್ತಾಪವಿದೆಯೇ ?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಸರ್ಕಾರವು ಹಸಿರು ಕಾರ್ಡುಗಳನ್ನು ನೀಡಲು ಹೊಸದಾಗಿ ಫಲಾನುಭವಿಗಳನ್ನು ಗುರುತಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. ಆದರೆ ದಿನಾಂಕ ೨೩-೮-೮೭ರಂದು ನಡೆದ ಜಿಲ್ಲಾಧಿಕಾರಿಗಳ ಮತ್ತು ಮುಖ್ಯಕಾರ್ಯದರ್ಶಿಗಳ ಸಮ್ಮೇಳನದಲ್ಲಿ ಹಸಿರು ಕಾರ್ಡುಗಳ ವಿತರಣೆಯನ್ನು ನಿಲ್ಲಿಸಿ ಇದಕ್ಕೆ ಬದಲಾಗಿ ಅನರ್ಹ ಫಲಾನುಭವಿಗಳಿಂದ ಫೋಟೊ (ಬೋಗಸ್) ಹಸಿರು ಕಾರ್ಡುಗಳನ್ನು ಪತ್ತೆ ಹಚ್ಚಿ ಅದಕ್ಕೆ ಸಮಾನವಾಗಿ ಹೊಸ ಹಸಿರು ಕಾರ್ಡುಗಳನ್ನು ಅರ್ಹ ಫಲಾನುಭವಿಗಳಿಗೆ ಕೊಡಲು ನಿರ್ಧರಿಸಲಾಗಿದೆ.

ಆ) ಫೋಟೊ ಹಸಿರು ಕಾರ್ಡುಗಳನ್ನು ಪತ್ತೆ ಹಚ್ಚಿ ಅಷ್ಟೆ ಕಾರ್ಡುಗಳನ್ನು ಅರ್ಹರಾದವರಿಗೆ ೧೯೮೫-೮೬ನೇ ಸಾಲಿನಲ್ಲಿ ಅಳವಡಿಸಿರುವ ಮಾದರಿಯಂತೆ ನೀಡಲಾಗುತ್ತಿದೆ.

ಕ.ರಾ.ರ.ಸಾ.ಸಂ. ಬಸ್ಸುಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ

೭೪೫. ಶ್ರೀ ಎಂ. ನಾರಾಯಣಸ್ವಾಮಿ (ಚೇತಮಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕ.ರಾ.ರ.ಸಾ.ಸಂ.ಯು ಎಲ್ಲಾ ವಾಹನಗಳಲ್ಲೂ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಅಳವಡಿಸಲಾಗಿದೆಯೆ :